# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ಹಿಂದಿನ ಪದನಾಮ: ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ

ಕುಲಸಚಿವರ ಕಛೇರಿ
ವಿಜಯಪುರ-586101 (ಕರ್ನಾಟಕ ರಾಜ್ಯ)
Phone No:08352-229051

Registrar Office
Vijayapur-586101 (Karnataka State)
Fax: 08352-229057

www.kswu.ac.in


ಸಂಖ್ಯೆ:ಅಮವಿವಿ/ಉಗ್ರಾಣ/ SC/ST/ 2017-18/1976

ದಿನಾಂಕ: 12-09-2017

## ದರಪಟ್ಟಿ ಕರೆಯೋಲೆ

ವಿಷಯ: ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರ ಶೈಕ್ಷಣಿಕ ಪ್ರವಾಸದ ವ್ಯವಸ್ಥೆಗೆ ದರಪಟ್ಟಿ ನೀಡುವ ಕುರಿತು

ಉಲ್ಲೇಖ: 1) ನಿರ್ದೇಶಕರು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಘಟಕ , ಅಮವಿವಿ ವಿಜಯಪುರ ರವರ ಪತ್ರ ದಿನಾಂಕ:05-08-2017

2)ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 10.09.2017

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ವಿಶ್ವವಿದ್ಯಾಲಯದ 120 ವಿದ್ಯಾರ್ಥಿನಿಯರು ಹಾಗೂ 15 ಸಿಬ್ಬಂಧಿಗಳು ಈ ಕೆಳಕಂಡ ಸ್ಥಳಗಳಿಗೆ 15 ದಿನಗಳ ಶೈಕ್ಷಣಿಕ ಪ್ರವಾಸವನ್ನು ಕೈಗೊಳ್ಳಲಿದ್ದು ಕಾರಣ ಕರ್ನಾಟಕ ರಾಜ್ಯದ ಅರ್ಹ, ನೊಂದಣಿ ಸಂಖ್ಯೆಯನ್ನು ಹೊಂದಿರುವ ಟೂರ್ಸ ಅಂಡ ಟ್ರಾವೆಲ್ಸ್ ಸಂಸ್ಥೆಗಳಿಂದ ದರಪಟ್ಟಿಯನ್ನು ಅಹ್ವಾನಿಸಲಾಗಿರುತ್ತದೆ. ದರಪಟ್ಟಿಗಳು ಅಲ್ಪೋಪಹಾರ, ಊಟ, ವಸತಿ ಮತ್ತು ಪ್ರಯಾಣದ ಎಲ್ಲಾ ವೆಚ್ಚಗಳನ್ನು ಹೊಂದಿರತಕ್ಕದ್ದು. [illegible] 3.10.17

| ಅನು | ಪ್ರವಾಸದ ಸ್ಥಳ | ವೀಕ್ಷಿಸಬೇಕಾದ ಸ್ಥಳ |
|---|---|---|
| 01 | ಅಜಂತಾ ಯಲ್ಲೋರ | ಬುದ್ಧನ ಗುಹೆಗಳು |
| 02 | ಮುಂಬಯಿ | ಡಾ. ಬಿ ಆರ್ ಅಂಬೇಡ್ಕರರವರ ಮನೆ ಮತ್ತು ಸಂಗ್ರಹಾಲಯ |
| 03 | ಸಾಂಚಿ | ಬುದ್ಧನ ಸ್ತೂಪಗಳು |
| 04 | ಲಕ್ನೋ | ಡಾ ಅಂಬೇಡ್ಕರ ಸ್ಮಾರಕಗಳು |
| 05 | ಸಾರನಾಥ | ಬುದ್ಧವಿಹಾರ ಮತ್ತು ಸ್ತೂಪಗಳು |
| 06 | ಗಯಾ | ಬುದ್ಧ ವಿಹಾರ |
| 07 | ಖುಷಿನಗರ | ಬುದ್ಧರ ನಿಬ್ಬಣ ಸ್ಥಳ / ಪರಿನಿರ್ವಾಹಣಾ ಸ್ಥಳ |
| 08 | ಆಗ್ರಾ | ತಾಜಮಹಲ |
| 09 | ನಾಗಪೂರ | ಧಿಕ್ಷಾ ಭೂಮಿ |
| 10 | ನೇಪಾಳ | ಲುಂಬಿನಿ/ ಕಪಿಲ ವಸ್ತು |
| 11 | ಭೂತಾನ | ಯಾವುದಾದರು ಮೂರು ಐತಿಹಾಸಿಕ ಸ್ಥಳಗಳು ಅಥವಾ ನಳಂದ ಬುದ್ದಿಷ್ಟ ಸಂಸ್ಥೆ/ ಪೊನರಜಾಂಗ/ ಬುದ್ಧ ಡೋರಡನ್ಮಾ ಇತರೆ ಸ್ಥಳಗಳು |

**ಷರತ್ತುಗಳು**

1) ಕರ್ನಾಟಕ ರಾಜ್ಯದಲ್ಲಿ ನೊಂದಣಿಯಾದ ಟೂರ್ಸ್ ಅಂಡ ಟ್ರಾವೇಲ್ಸ್ ಏಜನ್ಸಿಯಾಗಿರತಕ್ಕದ್ದು.
2) ಕನಿಷ್ಠ ಐದು ವರ್ಷಗಳ ಶೈಕ್ಷಣಿಕ ಪ್ರವಾಸದ ವ್ಯವಸ್ಥೆ ಮಾಡಿರುವ ಅನುಭವ ಹೊಂದಿರತಕ್ಕದ್ದು.
3) ಹಿಂದಿನ ಮೂರು ವರ್ಷದ ಆಧಾಯ ತೆರಿಗೆ ಸಲ್ಲಿಸಿರುವ ಮಾಹಿತಿಯನ್ನು ಸಲ್ಲಿಸತಕ್ಕದ್ದು.
4) ಕಡ್ಡಾಯವಾಗಿ ಟಿನ್ ನಂ ಹೊಂದಿರತಕ್ಕದ್ದು.
5) ಪ್ರಯಾಣ ಮಾಡುವ ಸಂದರ್ಭದಲ್ಲಿ ವಾಹನಗಳಿಗೆ ತೊಂದರೆಯಾದಲ್ಲಿ ಪರ್ಯಾಯ ವ್ಯವಸ್ಥೆಯನ್ನು ಮಾಡಿ ಶೈಕ್ಷಣಿಕ ಪ್ರವಾಸವನ್ನು ಯಶಸ್ವಿ/ಪೂರ್ಣಗೊಳಿಸತಕ್ಕದ್ದು.
6) ಪ್ರವಾಸಿಗಳಿಗೆ ಅವಶ್ಯಕತೆ ಇದ್ದ ಸಂದರ್ಭದಲ್ಲಿ ಪ್ರಥಮ ಚಿಕಿತ್ಸೆಯ ವ್ಯವಸ್ಥೆಯನ್ನು ಮಾಡತಕ್ಕದ್ದು
7) ವಸತಿಯನ್ನು ಮಾಡುವ ಸ್ಥಳಗಳಲ್ಲಿ ಸುಸಜ್ಜಿತವಾದ ಕೊಠಡಿಗಳನ್ನು ಏರ್ಪಾಡು ಮಾಡಿ ಗರಿಷ್ಠ 4 ಪ್ರವಾಸಿಗಳಿಗೆ ಮಿಕ್ಕದಂತೆ ನೋಡಿಕೊಳ್ಳತಕ್ಕದ್ದು.
8) ಪ್ರಯಾಣದ ವ್ಯವಸ್ಥೆಯನ್ನು ರಸ್ತೆ, ರೆಲ್ವೆ ಮತ್ತು ವಿಮಾನದ ಮೂಲಕ ಏರ್ಪಾಡು ಮಾಡತಕ್ಕದ್ದು.
9) ಪ್ರವಾಸದ ಸಂದರ್ಭದಲ್ಲಿ ಪ್ರವಾಸಿಗರ ಜೊತೆ ಯಾವುದೇ ರೀತಿಯ ಅಸಭ್ಯ ವರ್ತನೆ ಮಾಡಬಾರದು.
10) ಈ ಶೈಕ್ಷಣಿಕ ಪ್ರವಾಸವು ವಿಜಯಪುರದಿಂದ ಪ್ರಾರಂಭಿಸಿ ಎಲ್ಲಾ ಸ್ಥಳಗಳನ್ನು ವೀಕ್ಷಣೆ ಮಾಡಿದ ನಂತರ ಮರಳಿ ವಿಜಯಪುರಕ್ಕೆ ಸುರಕ್ಷಿತವಾಗಿ ಎಲ್ಲಾ ಪ್ರವಾಸಿಗರನ್ನು ತಲುಪಿಸತಕ್ಕದ್ದು.
11) ಈ ಪ್ರವಾಸಕ್ಕೆ ಸಂಬಂಧಿಸಿದಂತೆ ಅಗತ್ಯವಿರುವಷ್ಟು ಮುಂಗಡ ಹಣ ಮಂಜೂರಿಸಲಾಗುವುದು. ಉಳಿದ ಮೊತ್ತವನ್ನು ಯಶಸ್ವಿ ಪ್ರವಾಸದ ನಂತರ ಪಾವತಿಸಲಾಗುವುದು.

ಕುಲಸಚಿವರು
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ
ವಿಜಯಪುರ

ಪ್ರತಿ

1)ಆರ್ಥಿಕ ಅಧಿಕಾರಿಗಳು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ

2)ನಿರ್ದೇಶಕರು, ಪಜಾ ಪಪಂ ಅಧ್ಯಯನ ಘಟಕ ಅಮವಿವಿ ವಿಜಯಪುರ

3) ಮಾನ್ಯ ಕುಲಪತಿಗಳ ಆಪ್ತ ಸಹಾಯಕರು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

4) ಮಾನ್ಯ ಕುಲಸಚಿವರ ಆಪ್ತ ಸಹಾಯಕರು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

5)ಕಛೇರಿ ಪ್ರತಿ

6) ICT cell ಅಮಮವಿವಿ ವಿಜಯಪುರ ಇವರಿಗೆ

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
AKKAMAHADEVI WOMEN'S UNIVERSITY, VIJAYAPURA
ಕುಲಸಚಿವರು
REGISTRAR
ಜ್ಞಾನಶಕ್ತಿ ಕ್ಯಾಂಪಸ್, ತೊರವಿ
Jnanashakti Campus. Torvi
ವಿಜಯಪುರ-586108 (ಕರ್ನಾಟಕ ರಾಜ್ಯ)
Vijayapura-586108 (Karnataka State)
ದೂರವಾಣಿ ಸಂಖ್ಯೆ 08352-229051 Email: registrar.kswub@gmail.com Fax No:08352-29057

ಸಂಖ್ಯೆ : ಅಮವಿವಿ/ಪ.ಜಾ/ಪ.ಪಂ/2017-18/1976

ದಿನಾಂಕ : 04//09/2017 12

## ಪತ್ರಿಕಾ ಪ್ರಕಟಣೆ

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗದಲ್ಲಿ ಸ್ನಾತಕ/ಸ್ನಾತಕೋತ್ತರ ಅಧ್ಯಯನ ಮಾಡುತ್ತಿರುವ ಪ.ಜಾ/ಪ.ಪಂಗಡದ ಅಂತಿಮ ವರ್ಷದ ಸುಮಾರು 120 ವಿದ್ಯಾರ್ಥಿನಿಯರು 10 ಪ್ರಾಧ್ಯಾಪಕರು ಮತ್ತು 05 ಜನ ಬೊಧಕೇತರ ಸಿಬ್ಬಂದಿಗಳು ಸೇರಿ ಒಟ್ಟು 135 ಜನರಿಗೆ ಜನೇವರಿ 2018 ರಲ್ಲಿ ರಾಷ್ಟ್ರೀಯ ಶೈಕ್ಷಣಿಕ ಪ್ರವಾಸವನ್ನು ಪ.ಜಾ/ಪ.ಪಂ ಘಟಕದ ವತಿಯಿಂದ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಕಾರಣ ಸದರಿ ರಾಷ್ಟ್ರೀಯ ಶೈಕ್ಷಣಿಕ ಪ್ರವಾಸವನ್ನು ಜರುಗಿಸಿಕೊಡಲು ಕರ್ನಾಟಕ ರಾಜ್ಯದ ಟೂರ ಆಂಡ್ ಟ್ರಾವ್ಹೇಲ್ಸ್ ಸಂಸ್ಥೆಗಳಿಂದ ದರಪಟ್ಟಿಯನ್ನು ಕರೆಯಲಾಗಿದೆ. ಅರ್ಹ ಆಸಕ್ತಿಯುಳ್ಳವರು ಕುಲಸಚಿವರು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇವರಿಗೆ ದಿನಾಂಕ : 03/10/2017 ರೊಳಗಾಗಿ ದರಪಟ್ಟಿಯನ್ನು ಹಾಗೂ ಅದರ ವಿವರಗಳನ್ನು ಸ್ವ ಅರ್ಜಿಯೊಂದಿಗೆ ಮುಚ್ಚಿದ ಲಕೋಟೆಯ ಮೇಲೆ **"ರಾಷ್ಟ್ರೀಯ ಶೈಕ್ಷಣಿಕ ಪ್ರವಾಸ"** ಎಂದು ನಮೂದಿಸಿ ಸಲ್ಲಿಸಲು ಸೂಚಿಸಲಾಗಿದೆ. ದರಪಟ್ಟಿಯನ್ನು ದಿನಾಂಕ : 04/10/2017 ರಂದು ಅರ್ಜಿದಾರರ ಸಮ್ಮೂಖದಲ್ಲಿ ದರಪಟ್ಟಿಗಳನ್ನು ತೆರಯಲಾಗುವುದು. ಸದರಿ ದಿನದಂದೆ ಕಾರ್ಯಾದೇಶ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ www.kswub.ac.in ನ್ನು ಸಂಪರ್ಕಿಸಬಹುದಾಗಿದೆ.

ಸಹಿ

ಕುಲಸಚಿವರು

**ರಾಷ್ಟ್ರೀಯ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮದ ವಿವರ**

1. ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಜ್ಞಾನಶಕ್ತಿ ಆವರಣ
   ವಿದ್ಯಾರ್ಥಿನಿಯರು – 120
   ಶಿಕ್ಷಕರು – 10
   ಶಿಕ್ಷಕೇತರರು – 05

**ರಾಷ್ಟ್ರೀಯ ಶೈಕ್ಷಣಿಕ ಪ್ರವಾಸದ ಸ್ಥಳಗಳು**

1. ಅಜಂತಾ ಎಲ್ಲೋರಾ – ಬುದ್ಧನ ಗುಹೆಗಳು
2. ಮುಂಬೈ – ಡಾ. ಬಿ.ಆರ್.ಅಂಬೇಡ್ಕರ ಮನೆ, ಮತ್ತು ಸಂಗ್ರಹಾಲಯ ಚೈತ್ಯಭೂಮಿ
3. ಸಾಂಚಿ – ಬುದ್ಧನ ಸ್ತೂಪಗಳು
4. ಲಖನೌ – ಡಾ. ಅಂಬೇಡ್ಕರ ಸ್ಮಾರಕಗಳು
5. ಸಾರನಾಥ – ಬುದ್ಧವಿಹಾರ ಮತ್ತು ಸ್ತೂಪಗಳು
6. ಗಯಾ – ಬುದ್ಧ ವಿಹಾರ
7. ಕುಷಿನಗರ – ಬುದ್ಧರ ನಿಬ್ಬಣ ಸ್ಥಳ/ಪರಿನಿರ್ವಾಣ ಸ್ಥಳ
8. ಆಗ್ರಾ – ತಾಜ ಮಹಲ್
9. ನಾಗಪೂರ – ದಿಕ್ಷಾಭೂಮಿ
10. ನೇಪಾಳ – ಲುಂಬಿನಿ/ಕಪಿಲ ವಸ್ತು
11. ಭೂತಾನ – ಯಾವುದಾದರು ಮೂರು ಐತಿಹಾಸಿಕ ಸ್ಥಳಗಳು ಅಥವಾ ನಲಂದ ಬುದ್ಧಿಷ್ಠ

ಸಂಸ್ಥೆ/ಪೊನರ್ ಜಾಂಗ್/ಬುದ್ಧ ಡೊರಡನ್ಮಾ ಇತರೇ ಸ್ಥಳಗಳು (ಸದರಿ ಪ್ರವಾಸವು 15 ದಿನಗಳ ಪ್ರವಾಸವಾಗಿದ್ದು. ಪ್ರವಾಸದಲ್ಲಿ ಭಾಗಿಯಾಗಿರುವ ಎಲ್ಲರಿಗೂ ಉಪಹಾರ, ನೀರಿನ ಬಾಟಲ್‌ಗಳು, ಮಧ್ಯಾಹ್ನ ಮತ್ತು ರಾತ್ರಿ ಊಟ, ವಸತಿ–ಒಂದು ರೂಮಿನಲ್ಲಿ 6 ಜನ ಮಾತ್ರ, ಸ್ಥಳಗಳ ಪ್ರವೇಶ ಶುಲ್ಕ, ವೈದ್ಯಕೀಯ ವ್ಯವಸ್ಥೆ (First Aid) ಪ್ರಯಾಣದ ವ್ಯವಸ್ಥೆ ರಸ್ತೆ, ರೈಲ್ವೆ ಮತ್ತು ವಿಮಾನದ ಮೂಲಕ, ಪ್ರವಾಸದ ಪ್ರಯಾಣವು ವಿಜಯಪುರದಿಂದ ಪ್ರಾರಂಭಿಸಿ ಎಲ್ಲಾ ಸ್ಥಳಗಳನ್ನು ವಿಕ್ಷಿಸಿದ ನಂತರ ಮರಳಿ ವಿಜಯಪುರಕ್ಕೆ ತಲುಪಿಸುವುದು)

**ರಾಷ್ಟ್ರೀಯ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮ ಜರುಗಿಸಲು ಬೇಕಾದ ಷರತ್ತುಗಳು**

1. ಕರ್ನಾಟಕ ರಾಜ್ಯದಲ್ಲಿ ನೊಂದಣಿಯಾದ ಟೂರ ಆಂಡ್ಯ ಟ್ರಾವ್ಹೇಲ್ಸ್ ಎಜೆನ್ಸಿಯಾಗಿರುಬೇಕು
2. ಐದು ವರ್ಷಗಳ ಶೈಕ್ಷಣಿಕ ಪ್ರವಾಸದ ಅನುಭವ ಹೊಂದಿರಬೇಕು
3. 3 ವರ್ಷದ ಆದಾಯ ತೆರಿಗೆ ಮಾಹಿತಿ ಸಲ್ಲಿಸಬೇಕು
4. ಸಂಸ್ಥಯು ಟಿನ್ ಸಂಖ್ಯೆ ಹೊಂದಿರಬೇಕು
5. ಪ್ರಯಾಣ ಮಾಡುವ ಸಂದರ್ಭದಲ್ಲಿ ವಾಹನದ ತೊಂದರೆಯಾದಲ್ಲಿ ಬೇರೆ ವಾಹನದ ವ್ಯವಸ್ಥೆ ಮಾಡಿ ಪ್ರವಾಸ ಪೂರ್ಣಗೊಳಿಸುವುದು.
6. ಪ್ರವಾಸದ ಒಟ್ಟು ನಿಗದಿತ ಮೊತ್ತದಲ್ಲಿ 75% ಹಣ ಪ್ರವಾಸದ ಮುಂಚಿತವಾಗಿ ಉಳಿದ ಮೊತ್ತವನ್ನು ಪ್ರವಾಸ ಮುಗಿದ ನಂತರ ಪಾವತಿಸಲಾಗುವುದು.